ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಅಂತಿಮ ಹಂತದಲ್ಲಿದೆ.

ಆ) ರಾಜ್ಯದಲ್ಲಿ ಅನ್ನಪೂರ್ಣ ಯೋಜನೆಯಡಿ ಅರ್ಹ ಫಲಾನುಭವಿಗಳು ಇಲ್ಲದೇ ಇರುವುದರಿಂದ ಈ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ. ಅಂತ್ಯೋದಯ ಅನ್ನ ಯೋಜನೆಯಡಿ, ಮೈಸೂರು ನಗರದಲ್ಲಿ 1400 ಫಲಾನುಭವಿಗಳನ್ನು ಗುರುತಿಸಿ ಆಗಸ್ಟ್, 2001ರ ಮಾಹೆಯಿಂದ ಆಹಾರಧಾನ್ಯಗಳ ಹಂಚಿಕೆ ನೀಡಲಾಗುತ್ತಿದೆ.

ಇ) ರಾಜ್ಯದ ನೈಜ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಗುರುತಿಸಲು ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗಿದೆ.

ಗ್ರಾಮೀಂತರ ಪ್ರದೇಶದಲ್ಲಿ ಸ್ಥಳೀಯ ಗ್ರಾಮ ಲೆಕ್ಕಿಗರು ಹಾಗೂ ಗ್ರಾಮ ಪಂಚಾಯತ್ ಕಾರ್ಯದರ್ಶಿಯವರು ಸಂಯೋಜಕರಾಗಿ ಮನೆ-ಮನೆ ಸಮೀಕ್ಷೆ ಕಾರ್ಯವನ್ನು ಕೈಗೊಂಡಿದ್ದು, ಪಟ್ಟಣ ಪ್ರದೇಶಗಳಲ್ಲಿ ಸ್ಥಳೀಯ ನಗರಸಭೆ: ಪುರಸಭೆ ಅಧಿಕಾರಿಗಳು ಸಮೀಕ್ಷೆ ಕಾರ್ಯವನ್ನು ಕೈಗೊಂಡಿರುತ್ತಾರೆ.

ಮನೆ ಮನೆ ಸಮೀಕ್ಷೆ ಕಾರ್ಯವು ಅಂತಿಮ ಹಂತದಲ್ಲಿರುತ್ತದೆ.

ಸಾತನೂರು ಕ್ಷೇತ್ರದ ಆರೋಬೆಲೆ ಅಣೆಕಟ್ಟು ನಿರ್ಮಾಣ ಕಾರ್ಯ

157(172) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆ ಸಾತನೂರುಕ್ಷೇತ್ರದ ಆರೋಬೆಲೆ ಅಣೆಕಟ್ಟೆ ಕಾರ್ಯ ಎಂದು ಪ್ರಾರಂಭವಾಯಿತು;

ಆ) ಈ ಯೋಜನೆ ಯಾವಾಗ ಪೂರ್ಣಗೊಳ್ಳಬೇಕಿತ್ತು.

ಇ) ಈ ಯೋಜನೆಗೆ ನಿಗದಿ ಮಾಡಿದ ಅಂದಾಜು ವೆಚ್ಚ ಎಷ್ಟು; ಈಗ ಖರ್ಚು ಮಾಡಿದ ಹಣವೆಷ್ಟು ಈ ಅಣೆಕಟ್ಟು ನಿರ್ಮಾಣಕ್ಕಾಗಿ ಹಾಗೂ ಅಣೆಕಟ್ಟಿನ ಹಿನ್ನೀರಿನಿಂದ ಮುಳುಗಡೆ ಆಗಲಿರುವ ಎಷ್ಟು ಪ್ರದೇಶವನ್ನು ಸ್ವಾಧೀನಪಡಿಸಿಗೊಳ್ಳಲಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಬೆಂಗಳೂರು ಜಿಲ್ಲೆ ಸಾತನೂರು ಕ್ಷೇತ್ರದ ಆರೋಬೆಲೆ ಅಣೆಕಟ್ಟೆ ನಿರ್ಮಾಣದ ಕಾರ್ಯ 1984-85 ರಲ್ಲಿ ಪ್ರಾರಂಭವಾಯಿತು.

ಆ) ಈ ಯೋಜನೆಯನ್ನು ಮೂಲ ಅಂದಾಜಿನಲ್ಲಿ ತಿಳಿಸಿರುವಂತೆ 5 (ಐದು) ವರ್ಷಗಳಲ್ಲಿ ಅಂದರೆ 1989-90 ರಲ್ಲಿ ಪೂರ್ಣಗೊಳಿಸಬೇಕಿತ್ತು.

ಇ) ಈ ಯೋಜನೆಗೆ ನಿಗದಿ ಮಾಡಿದ ಮೂಲ ಅಂದಾಜು ವೆಚ್ಚ ರೂ. 2225 ಲಕ್ಷಗಳು (1983-84 ದರ ಪಟ್ಟಿಯಂತೆ) ಈಗ ಯೋಜನೆಯ ಪುನರ್ ಪರಿಷ್ಕೃತ ಅಂದಾಜನ್ನು ರೂ.

11,000 ಲಕ್ಷಗಳಿಗೆ ತಯಾರಿಸಿಲಾಗಿದೆ. ಯೋಜನೆಯ ಪ್ರಾರಂಭದಿಂದ 5/2002 ರವರೆಗೆ ರೂ. 7,392 ಲಕ್ಷವನ್ನು ಖರ್ಚು ಮಾಡಲಾಗಿದೆ. ಅಣೆಕಟ್ಟು ನಿರ್ಮಾಣಕ್ಕಾಗಿ ಹಾಗೂ ಅಣೆಕಟ್ಟಿನ ಹಿನ್ನೀರಿನಿಂದ ಮುಳುಗಡೆ ಆಗಲಿರುವ 770 ಹೆಕ್ಟೇರ್ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. (ಸರ್ಕಾರದ 162 ಹೆಕ್ಟೇರ್ ಜಮೀನನ್ನು ಹೊರತುಪಡಿಸಿ)

ರಾಜ್ಯದ ಗ್ರಾಹಕರ ರಕ್ಷಣಾ ಪರಿಷತ್ತಿನ ಉದ್ದೇಶಗಳು

159(174) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಗ್ರಾಹಕರ ರಕ್ಷಣಾ ಪರಿಷತ್ತು ಯಾವಾಗ ಸ್ಥಾಪನೆಯಾಯಿತು?

ಆ) ಈ ಪರಿಷತ್ತಿನ ಸದಸ್ಯರುಗಳು ಯಾರು

ಇ) ಈ ಪರಿಷತ್ತಿನ ಮೂಲ ಉದ್ದೇಶ ಏನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) 1. ಸರ್ಕಾರಿ ಅಧಿಸೂಚನೆ ಸಂಖ್ಯೆ: ಎಫ್‌ಟಿಡಿ 28 ಎಸ್‌ಎಲ್‌ಎಫ್ 92, ದಿನಾಂಕ: 17-3-99 ರಲ್ಲಿ ಕರ್ನಾಟಕ ರಾಜ್ಯ ಗ್ರಾಹಕರ ರಕ್ಷಣಾ ಪರಿಷತ್ತನ್ನು ಪ್ರಥಮವಾಗಿ ರಚಿಸಲಾಯಿತು.

2. ಸರ್ಕಾರಿ ಅಧಿಸೂಚನೆ ಸಂಖ್ಯೆ: ಅನಾಸ 135 ಸಲಫ 99, ದಿನಾಂಕ: 23-10-99 ರಲ್ಲಿ ಅಧಿಕಾರೇತರ ಸದಸ್ಯರುಗಳನ್ನು ಈ ಪರಿಷತ್ತಿನಿಂದ ಹೊರತುಪಡಿಸಲಾಯಿತು.

3. ಸರ್ಕಾರಿ ಅಧಿಸೂಚನೆ ಸಂಖ್ಯೆ: ಅನಾಸ 25 ಸಲಫ 99, ದಿನಾಂಕ: 14-3-2002 ರಲ್ಲಿ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಯಾವುದೂ ಮೊದಲೋ ಅಲ್ಲಿಯವರೆಗೆ ಇದನ್ನು ಪುನರ್ ಚಿಸಲಾಗಿದೆ.

ಆ) ಈ ಪರಿಷತ್ತು 39 ಸದಸ್ಯರನ್ನೊಳಗೊಂಡಿದೆ. ಸರ್ಕಾರಿ ಅಧಿಸೂಚನೆ ದಿನಾಂಕ: 14-3-2002ರಲ್ಲಿ ವಿವರಗಳಿದ್ದು, ಸದರಿ ಪ್ರತಿಯನ್ನು ಲಗತ್ತಿಸಿದೆ.

ಇ) ಗ್ರಾಹಕರ ಹಿತರಕ್ಷಣಾ ಕಾಯ್ದೆ, 1986 (ಕೇಂದ್ರ ಅಧಿನಿಯಮ 68:86) ರ ಸೆಕ್ಷನ್ 8ರ ಪ್ರಕಾರ, ಕೆಳಕಂಡಂತಹ ಗ್ರಾಹಕರ ಹಕ್ಕುಗಳ ಉತ್ತೇಜನ ಮತ್ತು ರಕ್ಷಣೆ, ಗ್ರಾಹಕ ರಕ್ಷಣಾ ಪರಿಷತ್ತಿನ ಉದ್ದೇಶಗಳಾಗಿರುತ್ತದೆ:-

1. ಜೀವನ ಮತ್ತು ಆಸ್ತಿಗೆ ಅಪಾಯಕಾರಿಯಾಗುವಂತಹ ವಸ್ತುಗಳ ಮಾರಾಟದ ವಿರುದ್ಧ ರಕ್ಷಣೆಯ ಹಕ್ಕು.

2. ನ್ಯಾಯವಲ್ಲದ ವ್ಯಪಾರ ಪ್ರವೃತ್ತಿಯಿಂದ ಗ್ರಾಹಕರನ್ನು ಸಂರಕ್ಷಿಸುವುದಕ್ಕೋಸ್ಕರ ಸೇವೆಗಳ ಹಾಗೂ ವಸ್ತುಗಳ ಗುಣಮಟ್ಟ, ಗಾತ್ರ, ಶಕ್ತಿ, ಶುದ್ದತೆ, ಪ್ರಮಾಣ ಮತ್ತು ಬೆಲೆ, ಇವುಗಳ ಬಗ್ಗೆ ಮಾಹಿತಿಪಡೆಯುವ ಹಕ್ಕು.